KACM010006292020

Presented on : 07-03-2020
Registered on : 07-03-2020

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**
**SPL.C/36/2020**

Complainant(PROSECUTION):
State by Excise Police, Chikkamagaluru, rep.by P.P. CKM

**VERSUS**

Accused:
1. Onkarappa/Onkara S/o Lt.Siddegowda, 50 yrs, Agri., R/at Machenahalli V, Lakya H, CKM
2:Mallikarjuna S/o Lt.Siddegowda, 45 yrs, Agri., R/at Machenahalli V, Lakya H, CKM

---

State Complainant}: Public Prosecutor, CKM,
Sri. B.M. LAXMANA GOWDA. appearing for A-1 and 2

---

**Offence punishable under : 13(1)(b),K.E.Act of KARNATAKA EXCISE ACT 1965, 20(i),20(a),8(b),ofNDPS,Act of Narcotic Drugs and Psychotropic Substances (Amendment) Act, 2001,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**Spl.C. No:36/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವಿಜಯ್ | ಪ್ರಾ.ಸಾ.- 03 |
| ತಂದೆ ಹೆಸರು | : | ವೆಂಕಪ್ಪ | ಚಾ.ಸಾ.- 03 |
| ವಯಸ್ಸು | : | 62 ವರ್ಷ | |
| ಉದ್ಯೋಗ | : | ನಿವೃತ್ತ ಅಬಕಾರಿ ಉಪ ನಿರೀಕ್ಷಕರು | |
| ವಾಸ ಸ್ಥಳ | : | ಚಿಕ್ಕಮಗಳೂರು | |

**ದಿನಾಂಕಃ 19-06-2025**

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ವೀಣಾ -ಪಿ.ಪಿ.ಯವರಿಂದಃ**

1. ಏಪ್ರಿಲ್ - 2013 ರಿಂದ ಜನವರಿ-2020 ರವರೆಗೆ ನಾನು ಅಬಕಾರಿ ರಕ್ಷಕನಾಗಿ ಚಿಕ್ಕಮಗಳೂರು ಅಬಕಾರಿ ವಲಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 09-09-2019 ರಂದು ಅಬಕಾರಿ ನಿರೀಕ್ಷಕರಾದ ಚಾಸಾ-6- ಶೇಖರ್ ರವರೊಂದಿಗೆ, ನಾನು, ಚಾಸಾ-4, 5 ಮತ್ತು 7 ರವರು ಅಬಕಾರಿ ನಿರೀಕ್ಷಕರಿಗೆ ಬಂದ ಮಾಹಿತಿ ಮೇರೆಗೆ, ಚಿಕ್ಕಮಗಳೂರು ತಾಲ್ಲೂಕಿನ, ಲಕ್ಯಾ ಹೋಬಳಿ, ಮಾಚೇನಹಳ್ಳಿ ಗ್ರಾಮದ ವಾಸಿ ಓಂಕಾರಪ್ಪ ಮತ್ತು ಮಲ್ಲಿಕಾರ್ಜುನ ಎಂಬುವವರ ಮನೆಯ ಹಿತ್ತಲಿನಲ್ಲಿ ಅಕ್ರಮವಾಗಿ ಗಾಂಜಾ ಬೆಳೆ ಬೆಳೆದಿದ್ದಾರೆಂದು ನಾವುಗಳು ಸರ್ಕಾರಿ ವಾಹನ ಸಂ ಕೆಎ-18/ಜಿ-1070 ರಲ್ಲಿ ಮಾಚೇನಹಳ್ಳಿ ಗ್ರಾಮಕ್ಕೆ ಹೋದೆವು.

3. ಮಾಚೇನಹಳ್ಳಿ ಗ್ರಾಮದಲ್ಲಿ ಸ್ಥಳೀಯರಾದ ಇಬ್ಬರನ್ನು ಪಂಚರನ್ನಾಗಿ ಬರಲು ಕೇಳಿಕೊಂಡಾಗ, ಅವರು ನಿರಾಕರಿಸಿರುತ್ತಾರೆ. ನಂತರ ಅಲ್ಲಿಯೇ ಸ್ವಲ್ಪ ದೂರದಲ್ಲಿ ಗ್ರಾಮ ಪಂಚಾಯ್ತಿಗೆ ತೆರಳಿ ಗ್ರಾಮ ಪಂಚಾಯ್ತಿ ಸಿಬ್ಬಂದಿ ಬಿಲ್ ಕಲೆಕ್ಟರ್ -ಚಾಸಾ-1 ಮತ್ತು ಪಿಡಿಒ ಚಾಸಾ-2 ರವರನ್ನು ಬರಮಾಡಿಕೊಂಡು ಅವರಿಗೆ ಮಾಹಿತಿ ತಿಳಿಸಿ, ನಮ್ಮ ವಾಹನದಲ್ಲಿ ಕರೆದುಕೊಂಡು ಬಂದೆವು, ಆರೋಪಿತರ ಮನೆಯಿಂದ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ, ಆರೋಪಿತರ ಮನೆಗೆ ನಡೆದುಕೊಂಡು ಹೋದೆವು.

4. ಆರೋಪಿತರ ಮನೆಯ ಹಿಂಬದಿಯ ಹಿತ್ತಲಿನಲ್ಲಿ ಇಬ್ಬರು ವ್ಯಕ್ತಿಗಳು ನಿಂತು ಮಾತನಾಡುತ್ತಿದ್ದುದು ಕೇಳಿಸಿತು, ನಾವು ಅಲ್ಲಿಗೆ ಹೋದಾಗ ನಮ್ಮನ್ನು ನೋಡಿ ಓಡಲು ಯತ್ನಿಸಿದರು, ಕೂಡಲೇ ಅವರನ್ನು ತಡೆದು ನಿಲ್ಲಿಸಿ, ವಿಚಾರಿಸಿ, ಹೆಸರು

ಕೇಳಲಾಗಿ ಅವರುಗಳು ಓಂಕಾರಪ್ಪ ಮತ್ತು ಮಲ್ಲಿಕಾರ್ಜುನ ಎಂದು ತಿಳಿಸಿದರು.

5. ನಾವು ಹುಡುಕುತ್ತಿದ್ದ ವ್ಯಕ್ತಿಗಳು ಇವರೇ ಎಂದು ತಿಳಿದು, ನಾವು ಬಂದ ವಿಚಾರವನ್ನು ಅವರಿಗೆ ತಿಳಿಸಿ, ಮನೆ ಹಾಗೂ ಹಿತ್ತಲನ್ನು ಶೋಧನೆ ಮಾಡಬೇಕೆಂದು ಕೇಳಿಕೊಂಡಾಗ ಶೋಧನಾ ವಾರೆಂಟನ್ನು ನ್ಯಾಯಾಲಯದಿಂದ ತರಲು ಕಾಲಾವಕಾಶ ಇಲ್ಲದ ಪ್ರಯುಕ್ತ ಸ್ಥಳದಲ್ಲಿಯೇ ಶೋಧನಾ ವಾರೆಂಟನ್ನು ತಯಾರಿಸಿದೆವು.

6. ಮನೆಯ ಹಿತ್ತಲಿನಲ್ಲಿ ಶೋಧನೆ ಮಾಡಲಾಗಿ, ಹಿತ್ತಲಿನಲ್ಲಿ ಚೆಂಡು ಹೂವಿನ ಗಿಡಗಳನ್ನು ಬೆಳೆದಿದ್ದು, ಅವುಗಳ ಮಧ್ಯದಲ್ಲಿ ಕೆಲವು ಗಾಂಜಾ ಗಿಡಗಳು ಇದ್ದುದು ಕಂಡು ಬಂದವು. ಅವುಗಳನ್ನು ಪರೀಕ್ಷಿಸಲಾಗಿ ಒಟ್ಟು 8 ಗಾಂಜಾ ಗಿಡಗಳು ಹೂ ಮತ್ತು ತೆನೆಗಳಿಂದ ಕೂಡಿದ ಹಸಿ ಗಾಂಜಾ ಗಿಡಗಳು ಆಗಿರುತ್ತವೆ.

7. ಇವುಗಳ ಬಗ್ಗೆ ಆರೋಪಿತರನ್ನು ಕೇಳಲಾಗಿ, ಅವುಗಳನ್ನು ನಾವೇ ಬೆಳೆದಿದ್ದು ಮಾರಾಟ ಮಾಡುವ ಸಲುವಾಗಿ ಬೆಳೆದಿರುವುದಾಗಿ ತಿಳಿಸಿರುತ್ತಾರೆ. ಗಾಂಜಾ ಬೆಳೆಯನ್ನು ಯಾವುದೇ ಪರವಾನಗಿ ಇಲ್ಲದೇ ಬೆಳೆದಿದ್ದಾಗಿ ಅಕ್ರಮ ಎಂದು ತಿಳಿಸಿ, ಬೆಳೆದಿದ್ದ 8 ಗಿಡಗಳನ್ನು ಬೇರು ಸಮೇತ ಕೀಳಲಾಯಿತು.

8. ನಂತರದಲ್ಲಿ ನಾವು ಕಛೇರಿಯಿಂದ ತೆಗೆದುಕೊಂಡು ಹೋಗಿದ್ದ ಎಲೆಕ್ಟ್ರಾನಿಕ್ ತೂಕದ ಯಂತ್ರದಿಂದ ತೂಕ ಮಾಡಲಾಗಿ ಒಟ್ಟು 17 ಕೆ.ಜಿ. 350 ಗ್ರಾಂ ತೂಕ ಇತ್ತು.

9. 3 ದೊಡ್ಡ ಪ್ಲಾಸ್ಟಿಕ್ ಚೀಲಗಳನ್ನು ತೆಗೆದು ಅವುಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ, ಒಂದು ಚೀಲದಲ್ಲಿ 5 ½ ಕೆ.ಜಿ.ಯಷ್ಟು, ಉಳಿದ 2 ಚೀಲಗಳಲ್ಲಿ ಉಳಿದ ಗಾಂಜಾ ಗಿಡಗಳನ್ನು ಹಾಕಿ , ದಾರದಿಂದ ಕಟ್ಟಿ , ಅರಗಿನ ಸಹಾಯದಿಂದ ಇಲಾಖಾ ಮೊಹರು ಮಾಡಿ ಸೀಲು ಮಾಡಲಾಯಿತು.

10. ಮಾದರಿ ಚೀಟಿಗಳನ್ನು ತಯಾರಿಸಿ, ಪಂಚರ ಸಹಿಗಳನ್ನು ಪಡೆದು, ಚೀಲಗಳಿಗೆ

ಅಂಟಿಸಲಾಯಿತು. ಈ ಬಗ್ಗೆ ಸ್ಥಳದಲ್ಲಿ ಮಧ್ಯಾಹ್ನ 1.00 ರಿಂದ 3.00 ಗಂಟೆಯವರೆಗೂ ನಿ.ಪಿ.2 ರಂತೆ ಮಹಜರ್ ಕ್ರಮ ಜರುಗಿಸಲಾಯಿತು. ನಿ.ಪಿ.2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಸ್ಥಳದ ಚೆಕ್ಕು ಬಂದಿಃ- ಉತ್ತರಕ್ಕೆಃ ನೀರಿನ ಕಾಲುವೆ, ದಕ್ಷಿಣಕ್ಕೆಃ ಆರೋಪಿತರ ಮನೆ, ಪೂರ್ವಕ್ಕೆಃ ರಂಗೇಗೌಡರ ಮನೆ, ಪಶ್ಚಿಮಕ್ಕೆಃ ಸಿದ್ದೇಗೌಡರ ಮನೆ ಇರುತ್ತದೆ.

11. ನಂತರ ದೊರೆತ ಸ್ವತ್ತುಗಳನ್ನು ವಶಪಡಿಸಿಕೊಂಡು ಆರೋಪಿತರನ್ನು ಮುಂದಿನ ಕ್ರಮಕ್ಕಾಗಿ ದಸ್ತಗಿರಿ ಮಾಡಿಕೊಂಡು ಬಂದೆವು. ಅಬಕಾರಿ ನಿರೀಕ್ಷಕರ ಮೊಬೈಲ್ ನಿಂದ ಕೃತ್ಯ ನಡೆದ ಸ್ಥಳದ ಫೋಟೋಗಳನ್ನು ತೆಗೆದಿರುತ್ತೇವೆ. ನಿ.ಪಿ.3 ರಿಂದ 5 ಮತ್ತು 7 ಎಂದು ಗುರುತಿಸಲಾದ ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

12. ಈ ದಿನ ನ್ಯಾಯಾಲಯದಲ್ಲಿ ತೆರೆದ ಸೀಲಾಗಿಲ್ಲದ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹಾಜರುಪಡಿಸಲಾದ ಮಾದರಿಗಾಗಿ ತೆಗೆದಿದ್ದ ಪುಡಿ ಪುಡಿ ಆಗಿರುವ ಒಣಗಿದ ಗಾಂಜಾ ಸೊಪ್ಪುಗಳು, 2 ದೊಡ್ಡ ಕಾಂಡ (ಬೆರಳು ಗಾತ್ರದ್ದು) ಮತ್ತು ಚಿಕ್ಕ ಚಿಕ್ಕ ಬೇರುಗಳು ಇವುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಪ್ರಾಸ್ಟಿಕ್ ಚೀಲದಲ್ಲಿ ಇರಿಸಲಾದ ಗಾಂಜಾವನ್ನು ಎಂ.ಒ.-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಎಂ.ಎಲ್.ಜಿ. ವಕೀಲರಿಂದಃ**

13. ಮಾಹಿತಿ ಬಂದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿದರೋ ಇಲ್ಲವೋ ನನಗೆ ಮಾಹಿತಿ ಇಲ್ಲ. ನಮ್ಮ ತನಿಖಾಧಿಕಾರಿ ದಾಳಿಗೆ ಹೋಗಬೇಕು ಎಂದು ಮಾಹಿತಿ ಹೇಳಿದ ಮೇಲೆಯೇ ನಾವು ಅವರೊಂದಿಗೆ ಹೋಗಿರುತ್ತೇವೆ.

14. ಸ್ಥಳೀಯರು ಪಂಚನಾಮೆಗೆ ಸಹಕರಿಸಿಲ್ಲ ಎಂದು ಹೇಳಿದ್ದು, ಅವರ ಹೆಸರು ಬರೆದಿಲ್ಲ ಎಂದರೆ ಸರಿ. ಸರ್ಕಾರದ ಕೆಲಸಕ್ಕೆ ಸಹಕರಿಸಿಲ್ಲ ಎನ್ನುವ ಬಗ್ಗೆ ಸದರಿ ಸ್ಥಳೀಯರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

15. ಪಂಚನಾಮೆ ಮಾಡುವ ಪೂರ್ವದಲ್ಲಿ ಆರೋಪಿಗಳು ನಿಂತಿದ್ದರು ಎನ್ನಲಾದ ಸ್ಥಳದ ಮತ್ತು ಮನೆ ಬಗ್ಗೆ ಸ್ಥಳೀಯ ಗ್ರಾಮ ಪಂಚಾಯ್ತಿ ಪಿ.ಡಿ.ಒ.ರವರಿಂದ ದಾಖಲೆಗಳನ್ನು ಪಡೆದುಕೊಂಡಿಲ್ಲ. ನಿ.ಪಿ.2 ರಂತೆ ಪಂಚನಾಮೆ ಮಾಡಿದ ನಂತರದಲ್ಲಿಯೂ ಸಹಾ ಸದರಿ ಗ್ರಾಮ ಪಂಚಾಯ್ತಿಗೆ ಭೇಟಿ ಕೊಟ್ಟು ಸದರಿ ದಾಖಲೆಗಳನ್ನು ಪಡೆದುಕೊಂಡಿಲ್ಲ.

16. ಸದರಿ ಸ್ಥಳದಲ್ಲಿ ಚೆಂಡು ಹೂವಿನ ಗಿಡಗಳು ಇದ್ದು, ಅವುಗಳ ಮಧ್ಯದಲ್ಲಿ 8 ಗಾಂಜಾ ಗಿಡಗಳು ಇದ್ದ ಬಗ್ಗೆ ಸ್ಥಳೀಯರಿಂದ ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ. ಸಸ್ಯಗಳನ್ನು ಗುರುತಿಸುವ ಬಗ್ಗೆ ನನಗೆ ವಿಶೇಷ ತರಬೇತಿ ಆಗಿಲ್ಲ. ಚೆಂಡು ಹೂ ಮತ್ತು ಗಾಂಜಾ ಗಿಡ ಇರುವ ಜಾಗದಲ್ಲಿ ಯಾವುದೇ ಕಳೆ ಗಿಡಗಳು ಇರಲಿಲ್ಲ, 2 ಮರಗಳು ಇದ್ದವು. ಮರಗಳು ಇದ್ದ ಬಗ್ಗೆ ಪಂಚನಾಮೆಯಲ್ಲಿ ನಮೂದು ಮಾಡಿಲ್ಲ.

17. ಆರೋಪಿತರು ಆ ದಿವಸ ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದರೆ ಬೂದು ಬಣ್ಣದ ಶರ್ಟು ಮತ್ತು ಚೌಕಳಿ ಲುಂಗಿ ಧರಿಸಿದ್ದರು ಎಂದು ಹೇಳುತ್ತಾರೆ. ಇಬ್ಬರೂ ವ್ಯಕ್ತಿಗಳು ಅದೇ ಬಣ್ಣದ ಬಟ್ಟೆ ಧರಿಸಿದ್ದರು. ಈ ವಿಚಾರವನ್ನು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ.

18. ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಪ್ಲಾಸ್ಟಿಕ್ ಚೀಲದ ಮೇಲೆ ಯಾವುದೇ ಸೀಲು ಇಲ್ಲ ಎಂದರೆ ಸರಿ. ಉಳಿದ 2 ಚೀಲಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ.

19. ಪಂಚನಾಮೆಯನ್ನು ಅಬಕಾರಿ ನಿರೀಕ್ಷಕರು ಬರೆದಿದ್ದಾರೆ. ನಿ.ಪಿ.2 ಪಂಚನಾಮೆಯನ್ನು ಅಬಕಾರಿ ವಲಯ ಕಛೇರಿಯಲ್ಲಿ ಮಾಡಿದ್ದು ಎಂದರೆ ಸರಿಯಲ್ಲ. ಸ್ಥಳಕ್ಕೆ ನಾನು ಭೇಟಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಕೃತ್ಯವನ್ನು ಒಪ್ಪಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-19-06-2025
(ರಾಜೇಶ್ವರಿ ಎನ್ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

Visit **ecourts.gov.in** for updates or download mobile app “**eCourts Services**” from Android or iOS